ಬೈಕುಗಳು ಕಾಣಿಸುತ್ತಿರಲಿಲ್ಲ, ಕಾಣಿಸಿದ ಬೈಕ್ ಗಳು ರಂಜಿನಿ –ಶಿವಶಂಕರ್ ಸರ್ ಅನ್ನು ಗುಪ್ತವಾಗಿ ಪ್ರೀತಿಸಿದ ಹಾಗೆ, ಸದ್ದು ಮಾಡಿದರೂ ಮಾಡದ ಹಾಗೆ ಏನನ್ನೂ ಬಿಟ್ಟುಕೊಡದಂತೆ ಹೋಗುತ್ತಿದ್ದವು. ಕಾಲೇಜಿನ ಕಟ್ಟಡ ಎಲ್ಲವನ್ನೂ ನೋಡುತ್ತಲೇ ಮೌನವಾಗಿ ನಿಂತುಬಿಟ್ಟಿತ್ತು. ಇವತ್ತು ಹೇಗೆ ಮಾತಾಡೋದು ಸರ್ ಹತ್ರ, ಸ್ಟಾಫ್ ರೂಂ ನಲ್ಲಿ ಒಬ್ಬರೇ ಇರುವಾಗ ಹೋಗಿ ಹೇಳಿಬಿಡಲಾ? ಅಥವಾ 'ಸರ್ ನಿಮ್ಮ ಜೊತೆ ಚೂರು ಮಾತಾಡೋಕಿತ್ತು' ಅಂದರೆ ಅವರೇ ಎಲ್ಲಿ ಮಾತಾಡೋದು ಅಂತ ಹೇಳಬೋದಾ? ರಂಜಿನಿ ನಡೆಯುತ್ತ ನಡೆಯುತ್ತ ಯೋಚಿಸುತ್ತಲೇ ಇದ್ದಳು. ಹಾಗೆ ನಡೆಯುತ್ತ ಬಂದವಳು ಕಾಲೇಜಿನ ಜಗಲಿ ಹೊಕಿದ್ದೇ ಒಮ್ಮೆ ಸ್ತಬ್ಧವಾಗಿ ಹೋದಳು. ಶಿವಶಂಕರ್ ಸರ್ ಅಲ್ಲಿ ನಿಂತು ಯಾರ ಬಳಿಯೋ ಮೊಬೈಲ್ ಮಾತಿನಲ್ಲಿ ನಿರತರಾಗಿಬಿಟ್ಟಿದ್ದರು. ಅವರದ್ದೇ ಯೋಚನೆಯಲ್ಲಿ ಅವರನ್ನೇ ತುಂಬಿಕೊಂಡು ಬಂದವಳಿಗೆ ಎದುರು ಅವರೇ ಸಿಕ್ಕಿಬಿಟ್ಟಾಗ ತಾನುಟ್ಟಿದ್ದ ಆಕಾಶನೀಲಿಯ ಬಣ್ಣದ ಕುರ್ತವೇ ಆಕಾಶವಾಗಿ ಆ ಆಕಾಶದಲ್ಲಿ ನೂರಾರು ಮೈನಾ ಹಕ್ಕಿಗಳು ವೃಂದಗಾನಗೈಯುತ್ತ ಹಾಡಿದಷ್ಟು ಖುಷಿಯಾಯ್ತು. ಆದರೆ, ಅವಳು ಬಂದಿದ್ದು, ಖುಷಿಯಾದದ್ದು, ತನ್ನನ್ನು ನೋಡುತ್ತ ನಿಂತಿದ್ದು ಇವ್ಯಾವುದನ್ನೂ ಗಮನಿಸದೇ ಮೊಬೈಲ್ ನಲ್ಲಿ ಗಂಭೀರವಾಗಿ ಶಿವಶಂಕರ್ ಮಾತಾಡುತ್ತಲೇ ಇದ್ದರು. ಅದೇ ಹೊತ್ತಿಗೆ ರಂಜಿನಿಯನ್ನು ದೂರದಿಂದಲೇ ನೋಡಿದ ಸುಮಲತಾ ಬಿರಬಿರನೇ ಬಂದು 'ರಂಜಿನಿ ನಿಂಗ್ ವಿಷ್ಯಾ ಗೊತ್ತಾಯ್ತಾ? ಪ್ರತೀಶಾ ಹೋದ್ಲು ಸುಸೈಡ್ ಮಾಡ್ಕೊಂಡ್ಳಂತೆ' ಎಂದು ಕಂಪಿಸುತ್ತ ಸಣ್ಣಗೇ ಹೇಳಿದಳು. 'ಏನು? ಪ್ರತೀಶಾ?' ಎಂದು ಚೀರಿದ ರಂಜಿನಿಗೆ ಅದೇ ಆಕಾಶದಿಂದ ನೂರಾರು ಮೈನಾ ಹಕ್ಕಿಗಳು ರೆಕ್ಕ ಪುಕ್ಕ ಎಲ್ಲಾ ಕಳಚಿಕೊಂಡು ಚೀರುತ್ತ ಬಿದ್ದಂತನ್ನಿಸಿತು.

'ಹೌದು ಮಾರಾಯ್ತಿ. ನಂಗೂ ನಂಬ್ಲಿಕ್ಕೆ ಆಗಿರ್ಲಿಲ್ಲ ಆಗ. ನಿನ್ನೆಯಷ್ಟೇ ಯಾವುದೋ ಕಾಂಪಿಟೇಶನ್ ಉಂಟು ನಿನ್ ಹೆಸ್ರು ಕೊಡು ಸುಮಾ ಅಂದಿದ್ಲು, ಕಾಲೇಜಲ್ಲಿ ಈ ವರ್ಷ ಫೈನ್ ಆರ್ಟ್ಸ್ ಕಾರ್ಯದರ್ಶಿ ನಾನು. ಒಳ್ಳೊಳ್ಳೆ ಕಾರ್ಯಕ್ರಮ ಮಾಡ್ಬೇಕು. ನಿಮ್ ಸಪೋರ್ಟ್ ಬೇಕು ಅಂದಿದ್ಲು. ಈಗ ನೋಡಿದ್ರೆ ಅವಳೇ ಇಲ್ಲ. ಅದಕ್ಕಿಂತಲೂ ಆಶ್ಚರ್ಯ ಅಂದ್ರೆ ಈ ಸಲದ ಕಾಲೇಜು ಮ್ಯಾಗಜೀನ್ ಗೆ ಆತ್ಮಹತ್ಯೆಯನ್ನು ವಿರೋಧಿಸಿ ಏನೋ ಲೇಖನ ಬರೆದುಕೊಟ್ಟಿದ್ದಳಂತೆ. ಮ್ಯಾಗಜೀನು ಇನ್ನೂ ರಿಲೀಸ್ ಆಗಿಲ್ಲ. ಆದ್ರೆ ಅವಳ ಆತ್ಮಹತ್ಯೆ ವಿರೋಧಿ ಲೇಖನ ಎಲ್ಲರೂ ಓದೋ ಮೊದ್ಲೇ ಅವಳೇ ಆತ್ಮಹತ್ಯೆ ಮಾಡ್ಕೊಂಡು ಬಿಟ್ಲು, ಎಂತ ಗ್ರಾಚಾರ ನೋಡು. ಯಾಕೆ ಹೀಗ್ ಮಾಡ್ಕೊಂಡ್ಲು ಗೊತ್ತಿಲ್ಲ, ಯಾರನ್ನೋ ತುಂಬಾ ಹಚ್ಚಿಕೊಂಡಿದ್ಲಂತೆ, ಸ್ಟುಡೆಂಟ್ ಅಲ್ಲ ಅಂತಿದ್ರಪ್ಪ. ಆದ್ರೆ ಆತ ಪ್ರೀತಿ ನಿರಾಕರಿಸಿದ್ನಂತೆ. ಅದ್ಕೆ ಹೀಗ್ ಮಾಡ್ಕೊಂಡ್ಲು ಅಂತಿದ್ದಾರೆ ಕೆಲವ್ರು. ಆದ್ರೂ ತಲೆಗೆಟ್ಟವಳು ಜೀವಕ್ಕೆ ಬೆಲೆಯೇ ಇಲ್ವಾ? ಜೀವ ಕಳೆದುಕೊಳ್ತಿದ್ದೇವೆ ಅನ್ನೋ ಭಯವಾದ್ರೂ ಬೇಡವಾ' ಎಂದು ಸುಮಲತಾ ಬೇಸರದಿಂದ ಹೇಳುತ್ತಲೇ ಇದ್ದಳು.

ಪ್ರತೀಶಾಳ ಕೊಂಕು ಮಾತು, ತುಂಟ ನೋಟ, ಭಂಡ ಧೈರ್ಯ, ಅವಳ ಅತಿಯಾದ ಮಹತ್ವಾಕಾಂಕ್ಷೆ, ಏನು ಬೇಕಾದರೂ ಮಾಡುವೆ ಎನ್ನುವ ಛಲ, ಜಿಟಿಜಿಟಿ ಮಳೆಯಂತೆ ಇದ್ದ ಅವಳ ಮಾತು, ಯಾರನ್ನಾದ್ರೂ ನೋಟದಲ್ಲೇ ತಿವಿದು ಬಿಡುವ ಅವಳ ಹೊಳಪುಗಣ್ಣುಗಳು, ತನ್ನ ನಂಬಿಕೆ, ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಅದೇ ಕಣ್ಣುಗಳು ಕೆಂಪಾಗಿ ಅಲ್ಲಿ ಹುಟ್ಟಿಕೊಳ್ಳುತ್ತಿದ್ದ ಬಂಡಾಯದ ರೋಷ, ಇವೆಲ್ಲಾ ಆ ಕ್ಷಣಕ್ಕೆ ಕಣ್ಣೆದುರು ಬಂದಂತಾಗಿ ರಂಜಿನಿ ಒಳಗೊಳಗೆ ಏನೇನೋ ಆಗಿ ತತ್ತರಿಸಿದಳು.

ಅಷ್ಟಕ್ಕೂ ತಾನು ಪ್ರತೀಶಾಳನ್ನು ದ್ವೇಷಿಸುತ್ತಿದ್ದುದೇಕೆ? ಒಂದಿನ ಅವಳೇ ತಾನೇ 'ಭಾರೀ ಚೆಂದ ಹಾಡ್ತಿ ರಂಜಿನಿ, ಆಲ್ ದಿ ಬೆಸ್ಟ್' ಅಂದಿದ್ದು, ಆ ಮೇಲೆ ಅಪರೂಪಕ್ಕೆ ಸಿಕ್ಕಾಗ ಬಾಯ್ತುಂಬಾ ನಗುತ್ತಿದ್ದುದು, ದೂರದಿಂದ ಕಂಡರೆ ಹಾಯ್ ಅಂತ ಕೈಬೀಸುತ್ತಿದ್ದುದು ಅವಳೇ ತಾನೇ, ಅವಳು ಉಡಾಫೆ ಹುಡುಗಿ ಆಗಿದ್ದರೂ ನನಗವಳು ಆ ರೀತಿ ಧಕ್ಕೆಯೇ ಇಲ್ಲ ಅಲ್ವಾ, ಅವಳು ನನ್ನೊಳಗೆ ಬಂದದ್ದು ಪುಟ್ಟ ಸಹಜ ನಗುವಿನಿಂದ, ಕೈಬೀಸುವಿಕೆಯಿಂದ, ಆದ್ರೂ ನಾನವಳನ್ನು ದ್ವೇಷಿಸಿದ್ದು ಅವಳು ಶಿವಶಂಕರ್ ಸರ್ ಜೊತೆ ಆಪ್ತವಾಗಿ ಮಾತಾಡುತ್ತಾಳೆ ಎನ್ನುವ ಒಂದೇ ಒಂದು ಕಾರಣಕ್ಕಾ? ನನ್ನ ಪ್ರೀತಿಗವಳು ಅಡ್ಡಬರುತ್ತಾಳೆ ಎನ್ನುವ ಭಯದಿಂದ ನಾನವಳನ್ನು ದ್ವೇಷಿಸಲು ಶುರು ಮಾಡಿದ್ನಾ' ರಂಜಿನಿ ಯೋಚಿಸುತ್ತ ನಿಂತಳು. ಎಲ್ಲರ